**ಆಂತರಿಕ ಗುಣಮಟ್ಟ ಭರವಸೆ ಕೋಶ**
**ಕನ್ನಡ ವಿಶ್ವವಿದ್ಯಾಲಯ, ಹಂಪಿ**
**ವಿದ್ಯಾರಣ್ಯ 583 276, ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ, ದೂರವಾಣಿ: 08394–241919**
email id: iqachampi@gmail.com, mobile no:94489 97450

---

**ಹಮ್ಮಿಕೊಂಡ ಕಾರ್ಯಕ್ರಮಗಳ ವರದಿ:**

**01).ಸಾಂಕ್ರಾಮಿಕ ರೋಗ ಕೊವಿಡ್–19 ಅರಿವಿನ ಕಾರ್ಯಕ್ರಮ**ದ ಅಂಗವಾಗಿ ದಿನಾಂಕ 06.06.2020ರಂದು ಹಮ್ಮಿಕೊಂಡಿದ್ದ **"ಕೊವಿಡ್–19 ಆರೋಗ್ಯದ ಮುನ್ನೆಚ್ಚರಿಕೆಗಳು"** ಕುರಿತು ವಿಶೇಷ ಉಪನ್ಯಾಸ

"ಕೊವಿಡ್ ವೈರಾಣು ನಿವಾರಣೆಗೆ ಇನ್ನು ಔಷಧಿಯನ್ನಾಗಲಿ, ಲಸಿಕೆಯನ್ನಾಗಲಿ ಕಂಡುಕೊಳ್ಳಲಾಗಿಲ್ಲ. ಆದರೆ ಕೊವಿಡ್ ಇಂದು ಬಹುಜನರ ಭಯ, ಆತಂಕಗಳಿಗೆ ಕಾರಣವಾಗಿದೆ. ಹಾಗಾಗಿ ಕೊವಿಡ್–19ರಿಂದ ಸುರಕ್ಷಿತವಾಗಿರಲು ನಾವು ಪ್ರತಿಯೊಬ್ಬರೂ ವೈಯಕ್ತಿಕವಾಗಿ ರೋಗನಿರೋಧಕ ಶಕ್ತಿಯನ್ನು ವರ್ಧಿಸುವಂತೆ ಬದುಕಬೇಕಾಗಿದೆ" ಎಂದು ವಿಶ್ವವಿದ್ಯಾಲಯದ ವೈದ್ಯರಾದ ಡಾ. ಸಂಪತ್ ಕುಮಾರ್ ತಗ್ಗಿ ಅವರು ಹೇಳಿದರು. ಅವರು ಕನ್ನಡ ವಿಶ್ವವಿದ್ಯಾಲಯದ ಆಂತರಿಕ ಗುಣಮಟ್ಟ ಭರವಸೆ ಕೋಶ(ಐಕ್ಯೂಎಸಿ)ವು **ಸಾಂಕ್ರಾಮಿಕ ರೋಗ ಕೊವಿಡ್–19 ಅರಿವಿನ ಕಾರ್ಯಕ್ರಮ**ದ ಅಂಗವಾಗಿ ದಿನಾಂಕ 06.06.2020ರಂದು ಹಮ್ಮಿಕೊಂಡಿದ್ದ **"ಕೊವಿಡ್–19 ಆರೋಗ್ಯದ ಮುನ್ನೆಚ್ಚರಿಕೆಗಳು"** ಕುರಿತು ವಿಶೇಷ ಉಪನ್ಯಾಸವನ್ನು ನೀಡುತ್ತಾ ಮಾತನಾಡುತ್ತಿದ್ದರು. ರೋಗ ಬಾರದಂತೆ ತಡೆಯಬೇಕಾದರೆ ಸ್ವಚ್ಛತೆ, ಮುಖಗವಸು ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದರ ಮೂಲಕ ಸಾಧ್ಯವಾಗಿಸಿಕೊಳ್ಳಬೇಕಾಗಿದೆ ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಸ.ಚಿ. ರಮೇಶ ಅವರು ಮಾತನಾಡುತ್ತಾ ಇನ್ನು ಮುಂದೆ ಕೊರೊನಾ ಜೊತೆಗೆ ನಾವು ಬದುಕಬೇಕಾಗಿದೆ. ಅದಕ್ಕಾಗಿ ನಾವು ಸದಾ ಎಚ್ಚರಿಕೆಯಿಂದ ಬದುಕುವುದಲ್ಲದೆ ಇತರರಿಂದ ಅಂತರವನ್ನು ಕಾಯ್ದುಕೊಳ್ಳಬೇಕಾಗಿದೆ ಎಂದು ಹೇಳಿದರು. ವಿಶ್ವವಿದ್ಯಾಲಯದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಮುಖಗವಸು ತೊಟ್ಟು, ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂವಾದ ನಡೆಸಿದರು.

ಕುಲಸಚಿವರಾದ ಡಾ. ಎ. ಸುಬ್ಬಣ್ಣ ರೈ, ಸ್ವಾಗತಿಸಿ, ಐಕ್ಯೂಎಸಿ ನಿರ್ದೇಶಕರಾದ ಡಾ. ಎ. ಮೋಹನ ಕುಂಟಾರ್ ವಂದನಾರ್ಪಣೆ ಮಾಡಿದರು. ಐಕ್ಯೂಎಸಿ ಸಹಾಯಕ ನಿರ್ದೇಶಕರಾದ ಶ್ರೀಮತಿ ಡಿ. ಪ್ರಭಾ ಕಾರ್ಯಕ್ರಮ ನಿರೂಪಿಸಿದರು.

## 02).ಸಮಾಜವಾದ ಮತ್ತು ಲೋಹಿಯಾವಾದ : ಪ್ರಸ್ತುತ ಸಂದರ್ಭ (08.07.2021)

**ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ(ವೆಬಿನಾರ್)ದ ವರದಿ**

ಲೋಹಿಯಾ ಅವರ ಚಿಂತನೆಗಳು ಕೇವಲ ರಾಜಕೀಯಕ್ಕೆ ಸೀಮಿತವಾದ ಸಂಗತಿಗಳಲ್ಲ. ಅವು ಸಮಾಜ, ಸಾಹಿತ್ಯ, ಸಂಸ್ಕೃತಿ ಎಲ್ಲೆಡೆ ಅದರ ವ್ಯಾಪ್ತಿಯಿದೆ. ಕರ್ನಾಟಕದ ಸಂದರ್ಭದಲ್ಲಿ ಲೋಹಿಯಾ ಅವರ ಚಿಂತನೆಗಳು ಈ ಎಲ್ಲ ಕ್ಷೇತ್ರಗಳಲ್ಲಿ ಪ್ರಭಾವವನ್ನು ಬೀರಿವೆ. ಅವರ ಕಾಲದ ರಾಜಕೀಯ ಕಟು ವಿಮರ್ಶಕರಾಗಿ ಜನಪರವಾದ ಆಲೋಚನೆಗಳನ್ನು

ಮುಂದಿಡುತ್ತಿದ್ದರು ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಸ.ಚಿ. ರಮೇಶ ಅವರು ಹೇಳಿದರು. ಅವರು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಡಾ. ರಾಮಮನೋಹರ ಲೋಹಿಯಾ ಅಧ್ಯಯನ ಪೀಠ ಮತ್ತು ಆಂತರಿಕ ಗುಣಮಟ್ಟ ಭರವಸೆ ಕೋಶದ ಸಂಯುಕ್ತ ಆಶ್ರಯದಲ್ಲಿ ದಿನಾಂಕ 08.07.2020ರಂದು ನಡೆದ **ಸಮಾಜವಾದ ಮತ್ತು ಲೋಹಿಯಾವಾದ : ಪ್ರಸ್ತುತ ಸಂದರ್ಭ** ಎಂಬ ವಿಷಯದ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ (ವೆಬಿನಾರ್)ವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಮುಂದುವರೆದು ಲೋಹಿಯಾ ಅವರು ನಿಷ್ಠುರ ಮಾತುಗಳ ಮೂಲಕ ಸಮಕಾಲೀನ ದಿನಗಳ ಸಮಾಜ ವಿರೋಧಿ ವ್ಯವಸ್ಥೆಗಳನ್ನು ಟೀಕಿಸುತ್ತಿದ್ದರು. ಅವರ ಸಮಾಜವಾದಿ ಚಿಂತನೆಗಳ ಪಳೆಯುಳಿಕೆಯಾಗಿ ಅನೇಕ ರಾಜಕೀಯ ಪಕ್ಷಗಳು ಇಂದಿಗೂ ರಾಜಕೀಯದಲ್ಲಿ ಸಕ್ರಿಯವಾಗಿವೆ. ಕರ್ನಾಟಕದಲ್ಲಿ ಗೋಪಾಲಗೌಡರಂತಹ ಸಮಾಜವಾದಿ ಚಿಂತಕರ ಮೂಲಕ ಲೋಹಿಯಾ ರೈತ ಚಳುವಳಿ ಸಂದರ್ಭದಲ್ಲಿ ನೇರವಾಗಿ ಪಾಲ್ಗೊಂಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳುವುದೆಂದು ಅವರು ಈ ಸಂದರ್ಭದಲ್ಲಿ ಹೇಳಿದರು.

ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ಹೈದ್ರಾಬಾದಿನ ಇಂಗ್ಲಿಷ್ ಮತ್ತು ವಿದೇಶಿ ಭಾಷೆಗಳ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ವಿ.ಬಿ. ತಾರಕೇಶ್ವರ ಅವರು ಉಪನ್ಯಾಸ ನೀಡುತ್ತ ಲೋಹಿಯಾ ಚಿಂತನೆಗಳು ಸಮಾಜವಾದದ ಸಮಗ್ರ ರೂಪದಲ್ಲಿ ಇವತ್ತು ಕಾಣಿಸಿಕೊಳ್ಳದಿರಬಹುದು. ಆದರೆ ಪ್ರತಿಯೊಂದು ಸಮಾಜದ ಪ್ರತಿಯೊಬ್ಬ ಚಿಂತಕರ ಒಳಗೂ ಲೋಹಿಯಾ ಚಿಂತನೆಗಳು ಇವೆ. ಲೋಹಿಯಾವಾದವನ್ನು ಮಾರ್ಕ್ಸ್‌ವಾದ ಮತ್ತು ಅಂಬೇಡ್ಕರ್ ಚಿಂತನೆಗಳ ಜೊತೆ ಜೊತೆಗೆ ಕೊಂಡು ಹೋಗಬೇಕಾದ ತುರ್ತು ಇದೆ ಎಂದು ಅವರು ಹೇಳಿದರು. ಡಾ. ರಾಮಮನೋಹರ ಲೋಹಿಯಾ ಅಧ್ಯಯನ ಪೀಠದ ಸಂಚಾಲಕರಾದ ಡಾ. ಈ. ಯರ್ರಿಸ್ವಾಮಿ ಅವರು ಪ್ರಾಸ್ತವಿಕ ಮಾತುಗಳನ್ನಾಡಿದರು. ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ಎ. ಸುಬ್ಬಣ್ಣ ರೈ ಅವರು ಸ್ವಾಗತಿಸಿದರು. ಆಂತರಿಕ ಗುಣಮಟ್ಟ ಭರವಸೆ ಕೋಶದ ನಿರ್ದೇಶಕರಾದ ಡಾ. ಎ. ಮೋಹನ ಕುಂಟಾರ್ ಅವರು ಕಾರ್ಯಕ್ರಮ ನಿರ್ವಹಿಸಿ ಕೊನೆಯಲ್ಲಿ ಧನ್ಯವಾದ ಸಮರ್ಪಿಸಿದರು. ಇದೇ ಸಂದರ್ಭದಲ್ಲಿ ವಿಜ್ಞಾನ ನಿಕಾಯದ ಡೀನ್ ಡಾ. ಮಾಧವ ಪೆರಾಜೆ ಮತ್ತು ಅನೇಕ ಆಸಕ್ತರು ಚರ್ಚೆಯಲ್ಲಿ ಪಾಲ್ಗೊಂಡರು.

**03).ದಿನಾಂಕ 29.7.2020ರಂದು ಆಯೋಜಿಸಿದ ಒಂದು ದಿನದ ರಾಷ್ಟ್ರೀಯ ವೆಬಿನಾರ್**

"ಅನ್ಯಭಾಷೆಯ ಲಯವನ್ನು ಕನ್ನಡದಲ್ಲಿ ಅಳವಡಿಸಿಕೊಳ್ಳುವುದು ಭಾಷಾಂತರಗಳಿಂದ ಸಾಧ್ಯವಾಗಿದೆ. ಭಾಷಾಂತರಗಳನ್ನು ಹಲವರ ಸಹಯೋಗದೊಡನೆ ರೂಪಿಸಿದಾಗ ಖಚಿತವಾದ ಭಾಷಿಕ ಲಯವೊಂದು ಸಿಗುವುದು ಸಾಧ್ಯವಿದೆ" ಎಂದು ಕನ್ನಡ ಸಾಹಿತ್ಯದ ಖ್ಯಾತ ವಿಮರ್ಶಕರಾದ ಬೆಂಗಳೂರಿನ ಎಸ್.ಆರ್. ವಿಜಯಶಂಕರ್ ಅವರು ಹೇಳಿದರು. ಅವರು ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ಕೇಂದ್ರ ಮತ್ತು ಆಂತರಿಕ ಗುಣಮಟ್ಟ ಭರವಸೆ ಕೋಶವು ದಿನಾಂಕ 29.7.2020ರಂದು ಆಯೋಜಿಸಿದ ಒಂದು ದಿನದ ರಾಷ್ಟ್ರೀಯ ವೆಬಿನಾರ್‌ನಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡುತ್ತಿದ್ದರು. ಮುಂದುವರೆದು "ಅನ್ಯಭಾಷೆಯ ವಿಚಾರಗಳ ಲೋಕಕ್ಕೆ ಪ್ರವೇಶಿಸಲು ಭಾಷಾಂತರಗಳು ಕಿಟಕಿಗಳಂತೆ ಸಹಕರಿಸುತ್ತವೆ. ಅವುಗಳನ್ನು ಇನ್ನಷ್ಟು ತಿಳಿದುಕೊಳ್ಳಬೇಕಾದರೆ ಬಾಗಿಲುಗಳನ್ನು ತೆರೆದು ಹೊರಹೋಗಬೇಕಾಗುತ್ತದೆ ಎಂದು ಹೇಳುತ್ತ ಹೊಸದಾಗಿ ಭಾಷಾಂತರವನ್ನು ಆರಂಭ ಮಾಡುವವರು ಮೂಲಕೃತಿಯ ಓದಿನ ಸಮಗ್ರ ತಿಳುವಳಿಕೆಯಿಂದ ಮುಂದಾಗಬೇಕು ಹೊರತು ವಾಕ್ಯಗಳನ್ನು ಪದಗಳನ್ನು ಕನಿಷ್ಠ ಘಟಕವಾಗಿ ರೂಪಿಸುವುದರಿಂದ ಉತ್ತಮ ಅನುವಾದಗಳು ರೂಪುಗೊಳ್ಳಲಾರವು" ಎಂದು ಅವರು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕೇಂದ್ರದ ನಿರ್ದೇಶಕ ಡಾ. ಮೋಹನ ಕುಂಟಾರ್ ಅವರು ಭಾಷಾಂತರಗಳನ್ನು ಕಾಲಕ್ಕೆ ಅನುಗುಣವಾಗಿ ರೂಪಿಸಿಕೊಂಡಿರುವುದನ್ನು ಕನ್ನಡ ಭಾಷಾಂತರಗಳ ಸಂದರ್ಭದಲ್ಲಿ ಗಮನಿಸಬಹುದು. ಯಾವುದೇ ಅನುವಾದ ಕೃತಿಯೊಂದು ರೂಪುಗೊಳ್ಳಬೇಕಾದರೆ ಅನುವಾದಕರ ವೈಯಕ್ತಿಕ ಹಿತಾಸಕ್ತಿಗಳು ಮಾತ್ರ ಕಾರಣವಾಗಿರುವುದಿಲ್ಲ. ಅದನ್ನು ಮೀರಿ ಸಮಕಾಲೀನ ಸಮಾಜ, ರಾಜಕೀಯ, ಸಾಹಿತ್ಯ ಕ್ಷೇತ್ರದ ಆಶೋತ್ತರಗಳು ಕೂಡ ಪ್ರಮುಖ ಪಾತ್ರವಹಿಸುತ್ತವೆ. ಈ ಆಶೋತ್ತರಗಳಿಗನುಗುಣವಾಗಿಯೇ ಅನುವಾದಗಳು ಯಾವುದೇ ಕಾಲಘಟ್ಟಕ್ಕನುಗುಣವಾಗಿ ವಿಭಿನ್ನವಾಗಿ ರೂಪುಗೊಳ್ಳುತ್ತವೆ. ಕಾಲಕ್ಕೆ ತಕ್ಕಂತೆ ಅನುವಾದಕರ ಆಸಕ್ತಿ ಹಾಗೂ ಇತರೆ ಒತ್ತಡಗಳಿಂದ ಭಾಷಾಂತರ ಪ್ರವೃತ್ತಿಗಳು ರೂಪುಗೊಳ್ಳುತ್ತವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸುಮಾರು 184 ಜನ ಆಸಕ್ತರು ನೋಂದಣಿ ಮಾಡಿಕೊಂಡು ಭಾಗವಹಿಸಿದರು. ಉಪನ್ಯಾಸದ ಬಳಿಕ ನಡೆದ ಸಂವಾದದಲ್ಲಿ ಮುಂಬೈ ವಿಶ್ವವಿದ್ಯಾಲಯ ಪ್ರಾಧ್ಯಾಪಕ ಡಾ.ಜಿ.ಎನ್. ಉಪಾಧ್ಯ, ಕನ್ನಡ ವಿಶ್ವವಿದ್ಯಾಲಯದ ಡಾ. ಯರ್‍ರಿಸ್ವಾಮಿ ಮೊದಲಾದ ಅನೇಕರು ಪಾಲ್ಗೊಂಡರು.

ವೆಬಿನಾರನ್ನು ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ಎ. ಸುಬ್ಬಣ್ಣ ರೈ ಅವರು ಸ್ವಾಗತಿಸುವುದರ ಮೂಲಕ ಆರಂಭಿಸಿದರು. ಆಂತರಿಕ ಗುಣಮಟ್ಟ ಭರವಸೆ ಕೋಶದ ಸಹಾಯಕ ನಿರ್ದೇಶಕರಾದ ಶ್ರೀಮತಿ ಡಿ. ಪ್ರಭಾ ಅವರು ಕಾರ್ಯಕ್ರಮ ನಿರೂಪಿಸಿ, ಕೊನೆಯಲ್ಲಿ ವಂದನಾರ್ಪಣೆ ಮಾಡಿದರು.

**04).ದಿ.30.07.2020 ರಂದು ಸಾಂಕ್ರಾಮಿಕ ರೋಗ ಕೊವಿಡ್–19 ಅರಿವಿನ ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಿದ ಒಂದು ದಿನದ ಕೊವಿಡ್–19 ಆರೋಗ್ಯದ ಮೇಲೆ ಬೀರಿದ ಪರಿಣಾಮಗಳು**

"ಕೊರೊನಾ ಬಗೆಗಿನ ಸಾಮಾಜಿಕ ಆತಂಕವು ಮನಸ್ಸಿನ ಮೇಲೆ ಆದರೆ ಅದರ ಪರಿಣಾಮ ದೈಹಿಕ ಆರೋಗ್ಯದ ಮೇಲೂ ಆಗುತ್ತದೆ" ಎಂದು ಹಾಸನದ ಎಸ್.ಡಿ.ಎಂ. ಆಯುರ್ವೇದಿಕ್ ಕಾಲೇಜಿನ ಉಪನ್ಯಾಸಕರಾದ ಡಾ. ಮುತ್ತಪ್ಪ ತೋಟದ ಅವರು ಹೇಳಿದರು. ಅವರು ಕನ್ನಡ ವಿಶ್ವವಿದ್ಯಾಲಯವು ಆಂತರಿಕ ಗುಣಮಟ್ಟ ಭರವಸೆ ಕೋಶದ ಮೂಲಕ ನಡೆಸಿದ **ಸಾಂಕ್ರಾಮಿಕ ರೋಗ ಕೊವಿಡ್–19 ಅರಿವಿನ ಕಾರ್ಯಕ್ರಮ**ದ ಅಂಗವಾಗಿ ಏರ್ಪಡಿಸಿದ ಒಂದು ದಿನದ **ಕೊವಿಡ್–19 ಆರೋಗ್ಯದ ಮೇಲೆ ಬೀರಿದ ಪರಿಣಾಮಗಳು** ಎಂಬ ವಿಷಯ ಕುರಿತು ಮಾತನಾಡುತ್ತಿದ್ದರು. ಮುಂದುವರೆದು "ಸಸ್ಯಾಹಾರ ಆಹಾರ ಪದ್ಧತಿಯು ರೋಗವನ್ನು ತಡೆಗಟ್ಟುವಲ್ಲಿ ಹೆಚ್ಚು ಪರಿಣಾಮಕಾರಿ" ಎಂಬುದನ್ನು ಅವರು ತಿಳಿಸಿದರು. ಕೊರೊನಾ ವೈರಸಸ ನ್ನು ತಡೆಗಟ್ಟುವ ವಿಧಾನಗಳು, ಔಷಧದ ರೂಪದಲ್ಲಿ ತೆಗೆದುಕೊಳ್ಳಬೇಕಾದ ಮನೆಮದ್ದುಗಳು, ಮಾನಸಿಕ ಸ್ಥೈರ್ಯವನ್ನು ಹೆಚ್ಚಿಸಿಕೊಳ್ಳುವುದರ ಬಗ್ಗೆ ಪಿಪಿಟಿ ಸ್ಲೈಡ್ಸ್‌ಗಳ ಮೂಲಕ ವಿವರಣೆ ನೀಡಿದರು.

ಕಾರ್ಯಕ್ರಮದಲ್ಲಿ ಸುಮಾರು 92 ಜನ ಆಸಕ್ತರು ಭಾಗವಹಿಸಿದರು. ಉಪನ್ಯಾಸದ ಬಳಿಕ ಆಸಕ್ತರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರು.

ಐಕ್ಯುಎಸಿ ನಿರ್ದೇಶಕರಾದ ಡಾ. ಮೋಹನ ಕುಂಟಾರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಕೊರೊನಾ ಅರಿವಿನ ಬಗೆಗೆ ವಿಶ್ವವಿದ್ಯಾಲಯದ ಒಳಗೆ ಮಾತ್ರವಲ್ಲ ಸಾರ್ವಜನಿಕರಲ್ಲೂ ಜಾಗೃತಿ ಮೂಡಿಸುವಲ್ಲಿ ವಿಶ್ವವಿದ್ಯಾಲಯದ ಆಂತರಿಕ ಗುಣಮಟ್ಟ ಭರವಸೆ ಕೋಶವು ಸರಣಿ ರೂಪದಲ್ಲಿ ಕಾರ್ಯಕ್ರಮ ನಡೆಸುತ್ತಿದೆ ಎಂದು ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ಎ. ಸುಬ್ಬಣ್ಣ ರೈ ಅವರು ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಇಂತಹ ಕಾರ್ಯಕ್ರಮಗಳನ್ನು ನಡೆಸುತ್ತಿರುವುದಾಗಿ ಹೇಳಿ ವೆಬಿನಾರ್‌ಗೆ ಚಾಲನೆ ನೀಡಿದರು. ಶೈಕ್ಷಣಿಕ ಉಪಕುಲಸಚಿವರಾದ ಡಾ. ಎಸ್.ವೈ. ಸೋಮಶೇಖರ ಅವರು ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಡಾ. ಈ. ಯರ್‍ರಿಸ್ವಾಮಿ, ಸಹಾಯಕ ಪ್ರಾಧ್ಯಾಪಕರು ಕೊನೆಯಲ್ಲಿ ವಂದನಾರ್ಪಣೆ ಮಾಡಿದರು.

**05).ದಿನಾಂಕ 01 ಮತ್ತು 02, ಡಿಸೆಂಬರ್ 2020ರಂದು ಎರಡು ದಿನಗಳ ರಾಷ್ಟ್ರಮಟ್ಟದ ಕಾರ್ಯಾಗಾರ**

ಕನ್ನಡ ವಿಶ್ವವಿದ್ಯಾಲಯದ ಆಂತರಿಕ ಗುಣಮಟ್ಟ ಭರವಸೆ ಕೋಶ(IQAC)ವು ಬೆಂಗಳೂರಿನ ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ತಿನ(NAAC) ಸಹಯೋಗದೊಡನೆ ನ್ಯಾಕ್ ಮೌಲ್ಯೀಕರಣ ಮತ್ತು ಮಾನ್ಯತಾ ಪ್ರಕ್ರಿಯೆ ಬಗೆಗೆ ದಿನಾಂಕ 01 ಮತ್ತು 02, ಡಿಸೆಂಬರ್ 2020ರಂದು ಎರಡು ದಿನಗಳ ರಾಷ್ಟ್ರಮಟ್ಟದ ಕಾರ್ಯಾಗಾರವನ್ನು ಆಯೋಜಿಸಿತ್ತು. ದಿನಾಂಕ 01.12.2020ರಂದು ವಿಶ್ವವಿದ್ಯಾಲಯದ ಮಂಟಪ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಡಾ. ಸ.ಚಿ. ರಮೇಶ್ ಅವರ ಅಧ್ಯಕ್ಷತೆಯಲ್ಲಿ ನ್ಯಾಕ್ ಸಲಹೆಗಾರರಾದ ಡಾ. ಗಣೇಶ ಹೆಗಡೆ ಅವರು ಕಾರ್ಯಾಗಾರವನ್ನು ಉದ್ಘಾಟಿಸಿದರು. ಡಾ. ಹೆಗಡೆ ಮಾತನಾಡುತ್ತಾ, ವಿಶ್ವವಿದ್ಯಾಲಯಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವ ಉದ್ದೇಶವನ್ನಿಟ್ಟುಕೊಂಡು ನ್ಯಾಕ್ ಸಂಸ್ಥೆ 1994ರಲ್ಲಿ ಪ್ರಾರಂಭವಾಯಿತು. ಈ ಸಂಸ್ಥೆ ಪ್ರತಿ 5 ವರ್ಷಗಳಿಗೊಮ್ಮೆ ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿ ಅಲ್ಲಿನ ಭೌತಿಕ ಮತ್ತು ಬೌದ್ಧಿಕ ಗುಣಮಟ್ಟ ಪರೀಕ್ಷಿಸುತ್ತದೆ. ಕಾಲ–ಕಾಲಕ್ಕೆ ನ್ಯಾಕ್ ಸಂಸ್ಥೆ ವಿಶ್ವವಿದ್ಯಾಲಯದ ಗುಣಮಟ್ಟವನ್ನು ಅಳೆಯುವ ಮಾನದಂಡಗಳಲ್ಲಿ ಬದಲಾವಣೆಗಳನ್ನು ಮಾಡುತ್ತ ಬಂದಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ನ್ಯಾಕ್ ಸಲಹೆಗಾರರಾದ ಡಾ. ಅಮಿಯ ಕುಮಾರ್ ರತ್ ಮತ್ತು ಡಾ. ಪೊನ್ಮುಡಿರಾಜ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕುಲಸಚಿವರಾದ ಡಾ. ಎ.ಸುಬ್ಬಣ್ಣ ರೈ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಐಕ್ಯುಎಸಿ ನಿರ್ದೇಶಕರಾದ ಡಾ. ಎ. ಮೋಹನ ಕುಂಟಾರ್ ಅವರು ಆರಂಭದಲ್ಲಿ ಪ್ರಾಸ್ತಾವಿಕವಾಗಿ ಕಾರ್ಯಾಗಾರದ ಅಗತ್ಯ ಮತ್ತು ರೂಪುರೇಷೆಗಳ ಕುರಿತು ತಿಳಿಯಪಡಿಸಿ ಎಲ್ಲರನ್ನು ಸ್ವಾಗತಿಸಿದರು. ಸಹಾಯಕ ನಿರ್ದೇಶಕರಾದ ಶ್ರೀಮತಿ ಡಿ. ಪ್ರಭಾ ಅವರು ಕಾರ್ಯಕ್ರಮ ನಿರ್ವಹಿಸಿ ಕೊನೆಯಲ್ಲಿ ಧನ್ಯವಾದ ಸಮರ್ಪಿಸಿದರು.

ನಂತರ ಎರಡು ದಿನಗಳ ಕಾಲ ನಡೆದ ಕಾರ್ಯಾಗಾರದಲ್ಲಿ ನ್ಯಾಕ್ ಕ್ವಾಲಿಟಿ ಇಂಡಿಕೇಟರ್ ಫ್ರೇಮ್‌ವರ್ಕ್‌ನ ಭಾಗವಾದ ಏಳು ಕ್ರೈಟೇರಿಯನ್‌ಗಳ ಬಗೆಗೆ ಮತ್ತು ವಾರ್ಷಿಕ ಗುಣಮಟ್ಟ ಭರವಸೆ ವರದಿ(ಎಕ್ಯುಎಆರ್) ಬಗೆಗೆ ಸಂಪನ್ಮೂಲ ವ್ಯಕ್ತಿಗಳಾದ ಡಾ. ಗಣೇಶ ಹೆಗಡೆ, ಡಾ. ಅಮಿಯ ಕುಮಾರ್ ರತ್ ಮತ್ತು ಡಾ. ಪೊನ್ಮುಡಿರಾಜ್ ಕಾರ್ಯಾಗಾರವನ್ನು ನಡೆಸಿಕೊಟ್ಟರು.

ಪ್ರಸ್ತುತ ಕಾರ್ಯಾಗಾರದಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕರು ಹಾಗೂ ಅಧಿಕಾರಿಗಳು ಮತ್ತು ಸ್ಥಳೀಯ ಪ್ರಥಮ ದರ್ಜೆ ಕಾಲೇಜುಗಳ ಐಕ್ಯುಎಸಿ ಸಂಚಾಲಕರು ಪಾಲ್ಗೊಂಡಿದ್ದರು. ಎಲ್ಲರೂ ಕಾರ್ಯಾಗಾರದಲ್ಲಿ ಸಕ್ರಿಯವಾಗಿ ಭಾಗವಹಿಸಿ ಉಪಯುಕ್ತ ಸಂವಾದವನ್ನು ಹುಟ್ಟುಹಾಕಿದರು. ಮಾನ್ಯ ಕುಲಸಚಿವರಾದ ಡಾ. ಎ. ಸುಬ್ಬಣ್ಣ ರೈ ಅವರ ಅಧ್ಯಕ್ಷತೆಯಲ್ಲಿ ದಿನಾಂಕ 02.12.2020ರಂದು ಸಂಜೆ ಸಮಾರೋಪ ಸಮಾರಂಭ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಪ್ರಾಧ್ಯಾಪಕರಾದ ಡಾ. ರಹಮತ್ ತರೀಕೆರೆ ಮತ್ತು ಸಹ ಪ್ರಾಧ್ಯಾಪಕರಾದ ಡಾ. ಅಮರೇಶ ಯತಗಲ್ ಅವರು ಕಾರ್ಯಾಗಾರ ಉಪಯುಕ್ತವಾಗಿತ್ತು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಸಂಪನ್ಮೂಲ ವ್ಯಕ್ತಿಗಳ ಪರವಾಗಿ ಡಾ. ಪೊನ್ಮುಡಿರಾಜ್ ಮಾತನಾಡಿದರು.

**06).ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ (03.02.2021)**

## Choice Based Credit System (CBCS) ಕುರಿತು ತರಬೇತಿ ಕಾರ್ಯಕ್ರಮ

ಕನ್ನಡ ವಿಶ್ವವಿದ್ಯಾಲಯ ಆಂತರಿಕ ಗುಣಮಟ್ಟ ಭರವಸೆ ಕೋಶ(ಐಕ್ಯೂಎಸಿ) ದಿಂದ ದಿನಾಂಕ : 03.02.2021 ರಂದು ನುಡಿಕಟ್ಟಡದಲ್ಲಿ ಸ್ನಾತಕೋತ್ತರ ಪದವಿ ಕಾರ್ಯಕ್ರಮ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ CBCS ಕುರಿತು ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಈ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಈ. ಯರ್ರಿಸ್ವಾಮಿ ಅವರು CBCS ಸ್ವರೂಪ ಮತ್ತು ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳ ಗುಣಾಂಕದ ಸ್ವರೂಪದ ಬಗೆಗೆ ಎರಡು ಅವಧಿಗಳಲ್ಲಿ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡಿದರು.

ಆರಂಭದಲ್ಲಿ IQAC ನಿರ್ದೇಶಕರಾದ ಡಾ. ಎ.ಮೋಹನ ಕುಂಟಾರ್ ಅವರು CBCS ಬಗೆಗೆ ಪ್ರಾಸ್ತಾವಿಕವಾಗಿ ವಿವರಿಸಿದರು. ಕೊನೆಯಲ್ಲಿ IQAC ಸಹಾಯಕ ನಿರ್ದೇಶಕರಾದ ಡಿ. ಪ್ರಭಾ ಅವರ ವಂದಾನಾರ್ಪಣೆಯೊಂದಿಗೆ ತರಬೇತಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

ಈ ಕಾರ್ಯಕ್ರಮದಲ್ಲಿ 40 ಜನ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳ ಪ್ರಥಮ ಸೆಮಿಸ್ಟರ್‌ನ ವಿದ್ಯಾಥಿಗಳು ಭಾಗವಹಿಸಿದ್ದರು.

ಕನ್ನಡ ವಿಶ್ವವಿದ್ಯಾಲಯ 2020–21ನೇ ಸಾಲಿನಲ್ಲಿ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಒಂದು ದಿನದ 'ಆಯ್ಕೆ ಆಧಾರಿತ ಗುಣಾಂಕ ಪದ್ಧತಿ' (ಸಿಬಿಸಿಎಸ್) ತರಬೇತಿ ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದ ಆಂತರಿಕ ಗುಣಮಟ್ಟ ಭರವಸೆ ಕೋಶ(ಐಕ್ಯುಎಸಿ)ದಿಂದ ನಡೆಸಲಾಯಿತು. ಸಂಪನ್ಮೂಲ ವಿದ್ವಾಂಸರಾಗಿ ಭಾಗವಹಿಸಿದ ಮಹಿಳಾ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಈ. ಯರ್ರಿಸ್ವಾಮಿ ಅವರು ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಸಿಬಿಸಿಎಸ್ ಪಠ್ಯಕ್ರಮ ಹಾಗೂ ಗ್ರೇಡಿಂಗ್ ಸಿಸ್ಟಂ ಬಗೆಗೆ ಮಾಹಿತಿಗಳನ್ನು ಆಧರಿಸಿ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಸಿಬಿಸಿಎಸ್ ಬಗೆಗೆ ಮನವರಿಕೆ ಮಾಡಿಕೊಡಲಾಯಿತು. ವಿದ್ಯಾರ್ಥಿಗಳು ಪ್ರಶ್ನೆ–ಉತ್ತರಗಳ ವಿಧಾನದಲ್ಲಿ ಮಾಹಿತಿ ಪಡೆದುಕೊಂಡು ತರಬೇತಿ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದರು. ತರಬೇತಿಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಮಹಿಳಾ ಅದ್ಯಯನ, ದೃಶ್ಯಕಲೆ, ಸಂಗೀತ ಮತ್ತು ಯೋಗ ಈ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯ ಮೊದಲ ಸೆಮಿಸ್ಟರ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಐಕ್ಯುಎಸಿ ನಿರ್ದೇಶಕರಾದ ಡಾ. ಎ.ಮೋಹನ ಕುಂಟಾರ್ ಅವರು ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನೂ ಸ್ವಾಗತಿಸುವ ಮೂಲಕ ಚಾಲನೆ ನೀಡಿದರು. ಐಕ್ಯುಎಸಿ ಸಹಾಯಕ ನಿರ್ದೇಶಕರಾದ ಡಿ. ಪ್ರಭಾ ಅವರ ವಂದಾನಾರ್ಪಣೆಯೊಂದಿಗೆ ತರಬೇತಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

**07).ಸಿಬಿಸಿಎಸ್ ತರಬೇತಿ ಕಾರ್ಯಕ್ರಮ (09.02.2021)**

ಕನ್ನಡ ವಿಶ್ವವಿದ್ಯಾಲಯದ ಅಧ್ಯಾಪಕರಿಗೆ ಒಂದು ದಿನದ 'ಆಯ್ಕೆ ಆಧಾರಿತ ಗುಣಾಂಕ ಪದ್ಧತಿ' (ಸಿಬಿಸಿಎಸ್) ತರಬೇತಿ ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದ ಆಂತರಿಕ ಗುಣಮಟ್ಟ ಭರವಸೆ ಕೋಶ(ಐಕ್ಯುಎಸಿ)ದಿಂದ ನಡೆಸಲಾಯಿತು. ತುಮಕೂರು ವಿಶ್ವವಿದ್ಯಾಲಯದ ಸಮಾಜಕಾರ್ಯ ಅಧ್ಯಯನ ವಿಭಾಗದ ಮುಖ್ಯಸ್ಥರು, ಐಕ್ಯುಎಸಿಯ ನಿರ್ದೇಶಕರೂ ಆದ ಪ್ರಾಧ್ಯಾಪಕ **ಡಾ.ಕೆ.ಜಿ. ಪರುಶುರಾಮ** ಇವರು ಸಂಪನ್ಮೂಲ ವಿದ್ವಾಂಸರಾಗಿ ಭಾಗವಹಿಸಿದರು. ಅವರು ಈ ಸಂದರ್ಭದಲ್ಲಿ ಸಿಬಿಸಿಎಸ್ ಪಠ್ಯಕ್ರಮ ಹಾಗೂ ಗ್ರೇಡಿಂಗ್ ಸಿಸ್ಟಂ ಬಗೆಗೆ ಪಿಪಿಟಿ ಮೂಲಕ ಮಾಹಿತಿಗಳನ್ನು ಒದಗಿಸಿದರು. ಯುಜಿಸಿ, ನ್ಯಾಕ್ ಮತ್ತು ಎನ್ಇಪಿಗಳ ಸಂದರ್ಭದಲ್ಲಿ ಸಿಬಿಸಿಎಸ್ ನ ವ್ಯವಸ್ಥಿತವಾದ ಅಳವಡಿಕೆ ಬಗೆಗೆ ಖಚಿತವಾದ ತಿಳುವಳಿಕೆಯನ್ನು ನೀಡಿದಲ್ಲದೆ ವಿದ್ಯಾರ್ಥಿ ಕೇಂದ್ರಿತವಾದ ಸಿಬಿಸಿಎಸ್ ಪಠ್ಯಕ್ರಮಗಳು ರೂಪಿಸುವ ಸಂದರ್ಭದಲ್ಲಿ ಸಂಸ್ಥೆ ಹಾಗೂ ಬೋಧಕರ ಜವಾಬ್ದಾರಿಗಳ ಬಗೆಗೆ ಮನವರಿಕೆ ಮಾಡಿಕೊಟ್ಟರು. ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅನೇಕ ಅಧ್ಯಾಪಕರು ಅಭಿಪ್ರಾಯಗಳನ್ನು ಹಂಚಿಕೊಂಡರು. ವಿಶ್ವವಿದ್ಯಾಲಯದ ಕುಲಸಚಿವರು, ಶೈಕ್ಷಣಿಕ ಉಪಕುಲಸಚಿವರು, ಅಧ್ಯಯನಾಂಗದ ನಿರ್ದೇಶಕರು ಮೊದಲಾದ ಅಧಿಕಾರಿ ವರ್ಗದವರು ಉಪಸ್ಥಿತರಿದ್ದರು.

ಐಕ್ಯುಎಸಿ ನಿರ್ದೇಶಕರಾದ ಡಾ. ಎ.ಮೋಹನ ಕುಂಟಾರ್ ಅವರು ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನೂ ಸ್ವಾಗತಿಸಿದರು. ಐಕ್ಯುಎಸಿ ಸಹಾಯಕ ನಿರ್ದೇಶಕರಾದ ಡಿ. ಪ್ರಭಾ ಅವರ ವಂದಾನಾರ್ಪಣೆಯೊಂದಿಗೆ ತರಬೇತಿ ಕಾರ್ಯಾಗಾರ ಮುಕ್ತಾಯವಾಯಿತು.

## 08).ದಿನಾಂಕ:12,13,ಮತ್ತು 14 ಮಾರ್ಚ್2021 ಮೂರು ದಿನಗಳ ಭಾಷಾಂತರ ತರಬೇತಿ ಕಮ್ಮಟ

'ಪ್ರಾಚೀನ ಕನ್ನಡ ಸಾಹಿತ್ಯವು ಅನುಸೃಜನೆಯ ಮೂಲಕವೇ ಶ್ರೀಮಂತವಾಗಿದೆ. ಕನ್ನಡ ಕಾವ್ಯಗಳು ಸಂಸ್ಕೃತ ಕಾವ್ಯಗಳ ಭಾಷಾಂತರದ ಮೂಲಕವೇ ರಚನೆಯಾಗಿರುವುದನ್ನು ಕಾಣಬಹುದು. ಹಾಗಾಗಿ ಭಾಷಾಂತರ ಚಟುವಟಿಕೆ ಎನ್ನುವುದು ಎಲ್ಲ ಕಾಲಕ್ಕೂ ಅನ್ವಯವಾಗುವ ಪ್ರಕ್ರಿಯೆಯಾಗಿದೆ' ಎಂದು ಡಾ. ಗುರುಮೂರ್ತಿ ಪೆಂಡಕೂರ್ ಅವರು ಕನ್ನಡ ವಿಶ್ವದ್ಯಾಲಯದ ಭಾಷಾಂತರ ಕೇಂದ್ರ, ಆಂತರಿಕ ಗುಣಮಟ್ಟ ಭರವಸೆ ಕೋಶ (ಐಕ್ಯುಎಸಿ) ಭಾಷಾಂತರ ಅಧ್ಯಯನ ವಿಭಾಗದ ಅಲುಮಿನಿ ಜೊತೆ ಕೂಡಿ ಸಂಯುಕ್ತವಾಗಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ಮೂರು ದಿನಗಳ ಭಾಷಾಂತರ ತರಬೇತಿ ಕಮ್ಮಟವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡುತ್ತಿದ್ದರು. ಮುಂದವರೆದು ಅವರು 'ಭಾಷಾಂತರ ಎಂಬುದು ಸರಳವಾದ ಕೆಲಸವಲ್ಲ, ಅದರಲ್ಲಿ ಕೌಶಲ್ಯವನ್ನು ರೂಪಿಸಿಕೊಳ್ಳಬೇಕಾದ ಅನುಭವವೂ ಅಷ್ಟೇ ಮುಖ್ಯವಾಗಿದೆ. ಪ್ರತಿ 20 ಕಿ.ಮೀ. ಅಂತರದಲ್ಲಿ ಭಾಷಾ ಬಳಕೆಯಲ್ಲಿ ಬದಲಾವಣೆಗಳು ಕಾಣಿಸುತ್ತದೆ. ಆಗ ವೈವಿಧ್ಯತೆಯ ಕಾರಣಕ್ಕಾಗಿ ಭಾಷಾಂತರವನ್ನು ಸಮಾನಾಂತರ ಪದಗಳ ಮೂಲಕ ಮಾಡಬಹುದಾಗಿದೆ. ಸಮಾನಾಂತರ ಪರಿಭಾಷೆಗಳು ಆಯಾ ಪ್ರದೇಶಗಳ ಹಿನ್ನೆಲೆಯಲ್ಲಿ ವಿಭಿನ್ನಾರ್ಥಗಳನ್ನು ಧ್ವನಿಸುತ್ತವೆ ಎಂಬ ಅರಿವು ಭಾಷಾಂತರಕಾರರಿಗೆ ಇರಬೇಕು' ಎಂದು ಅವರು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿರುವ ವಿಶ್ವವಿದ್ಯಾಲಯದ ಕುಲಸಚಿವರು ಡಾ. ಸುಬ್ಬಣ್ಣ ರೈ ಅವರು ಪ್ರಸ್ತುತ ಕಮ್ಮಟದಿಂದ ವಿದ್ಯಾರ್ಥಿಗಳು ಭಾಷಾಂತರದ ಬಗೆಗಿನ ಪ್ರಾಥಮಿಕ ಜ್ಞಾನವನ್ನು ಪಡೆದು ಮುಂದೆ ಅದನ್ನು ವಿಸ್ತರಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ವೇದಿಕೆಯಲ್ಲಿ ಅಲಿಮಿನಿ ಪ್ರತಿನಿಧಿಯಾಗಿ ಸಂಪನ್ಮೂಲ ವಿದ್ವಾಂಸ ಡಾ. ಎ. ಮಲ್ಲಿಕಾರ್ಜುನಪ್ಪ ಅವರು ಮಾತನಾಡಿದರು. 46 ಜನ ವಿದ್ಯಾರ್ಥಿಗಳು ಶಿಬಿರಾರ್ಥಿಗಳಾಗಿ ಭಾಗವಹಿಸಿದ್ದರು. ಭಾಷಾ ನಿಕಾಯದ ಡೀನ್ ಡಾ. ವೀರೇಶ್ ಬಡಿಗೇರ, ಲಲಿತ ಕಲೆಗಳ ನಿಕಾಯದ ಡೀನ್ ಡಾ. ಕೆ. ರವೀಂದ್ರನಾಥ ಇತರೆ ವಿಭಾಗದ ಪ್ರಾಧ್ಯಾಪಕರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಆರಂಭದಲ್ಲಿ ಕಮ್ಮಟದ ಉದ್ದೇಶ ಮತ್ತು ಅಗತ್ಯಗಳ ಬಗೆಗೆ ನಿರ್ದೇಶಕರಾದ ಡಾ. ಮೋಹನ ಕುಂಟಾರ್ ಅವರು ವಿವರಿಸಿದರು. ಐಕ್ಯುಎಸಿ ಸಹಾಯಕ ನಿರ್ದೇಶಕರಾದ ಡಿ. ಪ್ರಭಾ ಅವರು ಕಾರ್ಯಕ್ರಮವನ್ನು ನಿರೂಪಿಸಿ ಕೊನೆಯಲ್ಲಿ ಧನ್ಯವಾದ ಸಮರ್ಪಿಸಿದರು.

ನಿರ್ದೇಶಕರು,ಐಕ್ಯುಎಸಿ